



ಕೇರಳದ ಹಿನ್ನೀರು ಮತ್ತು ಕಡಲತೀರ ಅತ್ಯಧಿಕ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಗಿರಿಧಾಮಗಳು, ಹಿನ್ನೀರುಗಳು, ಹಳ್ಳಿಗಳು, ಕುಟುಂಬ ಮತ್ತು ಆಪ್ತರ ಜೊತೆಗೂಡಿ ಕಾಲ ಕಳೆಯುವುದಕ್ಕಾಗಿ ಚೇತೋಹಾರಿ ತಾಣಗಳಿವೆ.

ಅಂಥ ಸುಂದರ ತಾಣಗಳ ಸಂಕ್ಷಿಪ್ತ ಮಾಹಿತಿಗಳು ಇಲ್ಲಿವೆ.

**ಮುನ್ನಾರ್:** ಕೇರಳದ ಗಿರಿಧಾಮಗಳ ನಡುವೆ ಬಹು ಜನಪ್ರಿಯವಾದ ಹೆಸರೇ ಮುನ್ನಾರ್‌ನದ್ದು. 1870ರ ಆಸುಪಾಸಿನಲ್ಲಿ ಜಾನ್ ಡೇನಿಯಲ್ ಮನ್ರೋ ಅವರು ಮುನ್ನಾರ್ ಅನ್ನು ಸಂದರ್ಶಿಸಿದ ಬಳಿಕ, ಹೊರಜಗತ್ತಿಗೆ ಮುನ್ನಾರ್‌ನ ಪರಿಚಯವಾಯಿತು. ಇಲ್ಲಿನ ಬೆಟ್ಟಗಳ ಇಳಿಜಾರುಗಳು ಮತ್ತು ಜೋಡಣೆಗಳು ಅದೆಷ್ಟು ವ್ಯವಸ್ಥಿತವಾಗಿ ಹೊಂದಾಣಿಕೆಯಾಗಿವೆ ಎಂದರೆ, ಮುನ್ನಾರ್‌ನ ಬೆಟ್ಟ ಪ್ರದೇಶಗಳು, ಚಹಾ ತೋಟಗಳಿಗೆ ಹೇಳಿ ಮಾಡಿಸಿದಂತಿವೆ. ಎಂಭತ್ತು ಸಾವಿರ ಮೈಲಿಗಳಿಗೂ ಅಧಿಕ ವಿಸ್ತಾರದಲ್ಲಿರುವ ಚಹಾ ತೋಟಗಳು ಹಾಗೂ ಅಷ್ಟೇ ವಿಸ್ತಾರದಲ್ಲಿ ಬೆಳೆಸಲಾಗಿರುವ ಸುಗಂಧಭರಿತ ಬೆಳೆಗಳು, ಮಂಜು ಕವಿದ ಕಣಿವೆಗಳು ಮತ್ತು ಕೈಗೆಟುಕುತ್ತವೆಯೇನೋ ಎಂಬಂತೆ ಅತೀ ಕೆಳಮಟ್ಟದಲ್ಲಿರುವ ಮೋಡಗಳು! ಇವೆಲ್ಲವೂ ಜೊತೆಗೂಡಿ ಮುನ್ನಾರ್ ಅನ್ನು ನಿಜಕ್ಕೂ ಸುಂದರ ತಾಣವಾಗಿಸಿವೆ.

**ವಯನಾಡ್:** ಕೇರಳ ರಾಜ್ಯದ ಅತ್ಯಂತ ಹಚ್ಚಹಸುರಿನ ಸಂದರ್ಶನೀಯ ಸ್ಥಳಗಳ ಪೈಕಿ ವಯನಾಡ್ ಕೂಡಾ ಒಂದಾಗಿದೆ. ಪ್ರಾಕೃತಿಕ ಸೌಂದರ್ಯ, ಪ್ರಶಾಂತ ವಾತಾವರಣ ಮತ್ತು ಸಂಸ್ಕೃತಿಯಿಂದ ವಯನಾಡ್ ಸಂಪನ್ನವಾಗಿದೆ. ನಿಸರ್ಗ ಮತ್ತು ಮಾನವ ನಿರ್ಮಿತ ಪರಂಪರೆಗಳ ಪರಿಪೂರ್ಣ ಮಿಶ್ರಣವಾಗಿರುವ ಈ ಸ್ಥಳವು, ತನ್ನ ಸಂಸ್ಕೃತಿ, ಸಂಪ್ರದಾಯಗಳು ಹಾಗೂ ಬುಡಕಟ್ಟು ಪರಂಪರೆಗೆ ಹೆಸರುವಾಸಿಯಾಗಿದೆ. ಹೆಸರಿಲ್ಲದ ಅನೇಕ ಜಲಪಾತಗಳು ವಯನಾಡ್ ಸುತ್ತ ಕಂಡುಬರುತ್ತವೆ.

**ಕೋವಳಂ:** ಹೊಸ ವರ್ಷದ ಸಂಭ್ರಮಾಚರಣೆಗಳಿಗೂ ಹೆಸರುವಾಸಿಯಾಗಿರುವ ಕೇರಳದ ಅತ್ಯುತ್ತಮ ಕಡಲ ಕಿನಾರೆಗಳ ಪೈಕಿ ಒಂದೆನಿಸಿಕೊಂಡಿರುವ ಕೋವಳಂ, ಅರ್ಧಚಂದ್ರಾಕೃತಿಯ ಕಡಲಕಿನಾರೆಯಾಗಿದೆ. ಸದಾ ಚಟುವಟಿಕೆಗಳಿಂದ ಈ ಸ್ಥಳ ಕ್ರಿಯಾಶೀಲವಾಗಿದೆ. ಜಲ ಕ್ರೀಡೆಗಳಿಗಾಗಿ, ಸೌರ ಸ್ನಾನಕ್ಕಾಗಿ, ಆಯುರ್ವೇದ ಚಿಕಿತ್ಸೆಗಳಿಗಾಗಿ ಅಥವಾ ಹಾಗೆಯೇ ಸುಮ್ಮನೇ ಸಮುದ್ರದ ಅಲೆಗಳನ್ನು ಎಣಿಸುತ್ತಾ ಕಡಲ ಕಿನಾರೆಯಲ್ಲಿ ಹಾಯಾಗಿ ಕಾಲಕಳೆಯುವ ನಿಟ್ಟಿನಲ್ಲಿ ಇದೊಂದು ಅದ್ಭುತ ತಾಣ.

**ಅಪ್ಪಿ:** ಪೂರ್ವದ ವೆನಿಸ್ ಎಂದೇ ಅಕ್ಕರೆಯಿಂದ ಕರೆಯಲ್ಪಡುವ ಅಪ್ಪಿಯು ತನ್ನ ಸಂದರ್ಶಕರನ್ನು ಎಂದೆಂದಿಗೂ ನಿರಾಸೆಗೊಳಿಸದ ಅತ್ಯುತ್ತಮ ಸ್ಥಳಗಳ ಪೈಕಿ ಒಂದು. ಹಿನ್ನೀರು, ದೋಣಿಮನೆಗಳು ಮತ್ತು ವಿವಿಧ ರೂಪಗಳಲ್ಲಿರುವ ಪ್ರಾಕೃತಿಕ ಸೌಂದರ್ಯಗಳೊಂದಿಗೆ ದೊಡ್ಡ ಸಂಖ್ಯೆಯಲ್ಲಿ ಜನರನ್ನು ರಾಜ್ಯದ ಈ ಭಾಗದತ್ತ ಆಕರ್ಷಿಸುತ್ತಿದೆ. ಭತ್ತದ ಗದ್ದೆಗಳು, ಪ್ರಶಾಂತವಾದ ಚಾಪೆಲ್‌ಗಳು, ಪ್ರಾಚೀನ ದೇವಸ್ಥಾನಗಳು, ಮೀನುಗಾರಿಕಾ ಗ್ರಾಮಗಳು ಹಾಗೂ ಇನ್ನಿತರ ಅನೇಕ ಪ್ರೇಕ್ಷಣೀಯ ಸ್ಥಳಗಳು ಇಲ್ಲಿವೆ.

**ಇಡುಕ್ಕಿ :** ಒಂದೆಡೆ ಕುಳಿತುಕೊಂಡು, ಹಾಯಾಗಿ ಕಾಲ ಕಳೆಯುತ್ತಾ, ಮೈಮನಗಳನ್ನು ನಿರಾಳವಾಗಿಸಿಕೊಳ್ಳುವುದು ನಿಮ್ಮ ಆದ್ಯತೆಯಾಗಿದ್ದಲ್ಲಿ, ಇಡುಕ್ಕಿಯು ನಿಮ್ಮಂಥವರಿಗೆಂದೇ ಹೇಳಿಮಾಡಿಸಿದ ತಾಣ. ಜೀವಕಳೆಯಿಂದ ತುಂಬಿಕೊಂಡಿರುವ ಬೆಟ್ಟಗಳು ಮತ್ತು ಸಮೃದ್ಧ ಕಾನನಗಳ ನಡುವೆ ಇರುವ ಈ ಸುಂದರ ಸ್ಥಳವು, ತನ್ನ ಶೋಭೆ ಮತ್ತು ಆಕರ್ಷಣೆಗಳೊಂದಿಗೆ ಕುತೂಹಲೀ ಪ್ರವಾಸಿಗರನ್ನು, ಪ್ರಕೃತಿಪ್ರೇಮಿಗಳನ್ನು ಹಾಗೂ ಛಾಯಾಚಿತ್ರಗ್ರಾಹಕರನ್ನು ಸಮಾನವಾಗಿಯೇ ಕೈಬೀಸಿ ಕರೆಯುತ್ತಿದೆ. ಸುಗಂಧಭರಿತ ಚಹಾ ಮತ್ತು ಸಾಂಬಾರ ಪದಾರ್ಥಗಳ ತೋಟಗಳಿಂದ ಸುತ್ತುವರೆಯಲ್ಪಟ್ಟಿರುವ ಇಡುಕ್ಕಿಯು ಚಾರಣಗಳಿಗೆ, ಪ್ರಕೃತಿ ನಡಿಗೆಗಳನ್ನು ಕೈಗೊಳ್ಳುವುದಕ್ಕೆ ಹಾಗೂ ಪಕ್ಷಿವೀಕ್ಷಣೆಯಂತಹ ಚಟುವಟಿಕೆಗಳಿಗೆ ಹೆಸರುವಾಸಿ.

**ವರ್ಕಳ :** ವರ್ಕಳವು ಕೇವಲ ತನ್ನ ಕಡಲ ಕಿನಾರೆಗಳಿಗಷ್ಟೇ ಅಲ್ಲದೇ, ಪ್ರಾಚೀನ ಜನಾರ್ದನ ಸ್ವಾಮಿ ದೇವಸ್ಥಾನಕ್ಕೂ ಅಷ್ಟೇ ಪ್ರಸಿದ್ಧವಾಗಿದೆ. ಒಂದು ಪಾರ್ಶ್ವದಲ್ಲಿ ದಿನ್ನೆಗಳಿಂದ ಹಾಗೂ ಮತ್ತೊಂದು ಪಾರ್ಶ್ವದಲ್ಲಿ ಸಮೃದ್ಧ ಹಚ್ಚಹಸುರಿನಿಂದ ಒಡಗೂಡಿರುವ ಇಲ್ಲಿನ ಮನಸೂರೆಗೊಳ್ಳುವ ಕರಾವಳಿ ತೀರವು ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ದೋಣಿ ವಿಹಾರಗಳು, ಸರ್ಫಿಂಗ್, ಪ್ಯಾರಾಸೈಲಿಂಗ್ ಹಾಗೂ ಕುದುರೆ ಸವಾರಿಯಂತಹ ಚಟುವಟಿಕೆಗಳಿಗೂ ವರ್ಕಳ ಪ್ರಸಿದ್ಧಿ ಹೊಂದಿದೆ. ಸೂರ್ಯಾಸ್ತಮಾನದ ವೇಳೆಯಲ್ಲಿ ಸಾಟಿಯಿಲ್ಲದ ಇಲ್ಲಿನ ಪರಿಸರದ ಸೌಂದರ್ಯವನ್ನು ಸವಿಯಲು ವರ್ಕಳಕ್ಕೆ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಬಂದು ಸೇರುತ್ತಾರೆ.

**ಕಾಸರಗೋಡು :** ಸುಪ್ರಸಿದ್ಧ ಬೇಕಲ್ ಕೋಟೆ ಮತ್ತು ಅನಂತಪುರ ಸರೋವರ ದೇವಸ್ಥಾನದ ತವರೂರಾಗಿರುವ ಕಾಸರಗೋಡು, ಒಂದು ಪಾರ್ಶ್ವದಲ್ಲಿರುವ ಪಶ್ಚಿಮ ಘಟ್ಟಗಳ ಹಾಗೂ ಮತ್ತೊಂದು ಪಾರ್ಶ್ವದಲ್ಲಿರುವ ಅರಬ್ಬೀ ಸಮುದ್ರದ ನಡುವೆ ಸಿಲುಕಿಕೊಂಡಂತಿದೆ. ಜಾರಿ ಬಿದ್ದಂತಿರುವ ಬೆಟ್ಟಗಳು, ಸಮೃದ್ಧ ಹಸುರಿನ ಕಲ್ಪವೃಕ್ಷಗಳು, ಹದವಾಗಿ ಬೀಸುವ ಸಾಗರ ಮಾರುತ ಹಾಗೂ ಪಾರಂಪರಿಕ ದೇವಸ್ಥಾನಗಳು ಮತ್ತು ಸ್ಮಾರಕಗಳ ಅಗಾಧ ಸಂಖ್ಯೆಯು ರಜಾ ಅವಧಿಯನ್ನು ಪ್ರಶಾಂತವಾಗಿ ಕಳೆಯ ಬಯಸುವ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ.

ಮುಂಗಾರು ಮಳೆಯ ಅರ್ಭಟದ ನಡುವೆಯೇ ಕೇರಳವನ್ನು ಸುತ್ತುವುದು ಇನ್ನಷ್ಟು ಮುದ ನೀಡುವ ಸಂಗತಿ.

**ತಲುಪುವ ಮಾರ್ಗ:** ದೇಶದ ಪ್ರಮುಖ ನಗರಗಳಿಂದ ಕೇರಳಕ್ಕೆ ಸಾಕಷ್ಟು ಬಸ್, ರೈಲು ಹಾಗೂ ವಿಮಾನ ಸಂಪರ್ಕಗಳಿವೆ. ಅಲ್ಲಿಂದ ಪ್ರವಾಸಿಗರಿಗೋಸ್ಕರವೇ ಸಾಕಷ್ಟು ಸಾರಿಗೆ ಬಸ್‌ಗಳ ವ್ಯವಸ್ಥೆಯಿದೆ. ನಿಮಗೆ ಬೇಕಾದ ಕಡಲ ಕಿನಾರೆಗಳಿವೆ ಬಸ್ ಅಥವಾ ಕ್ಯಾಬ್‌ಗಳ ಮೂಲಕ ಪ್ರಯಾಣಿಸಬಹುದು.